(41)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ಇವರು ನಿಯಮ-72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡುವ ಬಗ್ಗೆ.**

**ವಿಷಯ**

ರಾಜ್ಯದ ಪುರಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಅಕ್ರಮ ಫ್ಲೆಕ್ಸ್- ಬ್ಯಾನರ್‌ಗಳ ಹಾವಳಿ ಮತ್ತು ಅದರಿಂದ ಸಾರ್ವಜನಿಕ ಸುರಕ್ಷತೆಗೆ ಉಂಟಾಗುತ್ತಿರುವ ಅಪಾಯದ ಬಗ್ಗೆ.

**ಉತ್ತರ**

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಜಾಹಿರಾತನ್ನು ಪ್ರದರ್ಶಿಸಲು ಅವಕಾಶವಿರುವುದಿಲ್ಲ. ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಪ್ರಕರಣ 136ರಡಿ ಅನಧಿಕೃತ ಜಾಹಿರಾತನ್ನು ಅಳವಡಿಸಿದ್ದಲ್ಲಿ ಅಂತಹ ಜಾಹಿರಾತನ್ನು ತೆರವುಗೊಳಿಸಲು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು / ಮುಖ್ಯಾಧಿಕಾರಿಗಳಿಗೆ ಅಧಿಕಾರ ಇರುತ್ತದೆ. ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿ ಬಂಧಿಸುವ) ಅಧಿನಿಯಮ 1981 ರ ಪ್ರಕರಣ 3 ರಲ್ಲಿ ಜಾಹಿರಾತುಗಳ ಮೂಲಕ ಅನಧಿಕೃತವಾಗಿ ಸಾರ್ವಜನಿಕ ದೃಷ್ಟಿಗೆ ಒಳಗಾಗಿರುವ ಯಾವುದೇ ಸ್ಥಳಗಳ ಮೇಲೆ ಅಂಟಿಸಿದರೆ / ನಿಲ್ಲಿಸಿದರೆ / ಪ್ರದರ್ಶಿಸಿದರೆ ಅಂತಹ ವ್ಯಕ್ತಿಗಳಿಗೆ 6 ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾಗೃಹವಾಸ ಅಥವಾ ಒಂದು ಸಾವಿರ ರೂ. ಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಅವೆರಡನ್ನೂ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

ಮೇಲ್ಕಂಡ ಕಾಯ್ದೆಗಳಲ್ಲಿ ಕಲ್ಪಿಸಲಾದ ಅವಕಾಶದಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತ ಜಾಹಿರಾತು ಪ್ರದರ್ಶನ ತೆರವುಗೊಳಿಸಲು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಂದ ಕ್ರಮವಹಿಸಲಾಗುತ್ತಿದೆ.

ಇ-ಸಂಖ್ಯೆ: ನಅಇ 18 ಜಿಇಎಲ್ 2026 (ಇ)

**( ರಹೀಂ ಖಾನ್ )**
ಪೌರಾಡಳಿತ ಮತ್ತು ಹಜ್ ಸಚಿವರು